(೫) ಶಾಸನ ರಚನೆ

(ಅ) ವಿಧೇಯಕಗಳನ್ನು ಮಂಡಿಸುವುದು

1. ಕರ್ನಾಟಕ ಎಣ್ಣೆ ತಾಳೆ (ಸಾಗುವಳಿ, ಉತ್ಪಾದನೆ ಮತ್ತು ಸಂಸ್ಕರಣದ ವಿನಿಮಯ) ವಿಧೇಯಕ, 2000

ಮಂಡನೆ ಅನುಮತಿ ಕೋರಿಕೆ

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, 2000ನೇ ಸಾಲಿನ ಕರ್ನಾಟಕ ಎಣ್ಣೆ ತಾಳೆ (ಸಾಗುವಳಿ, ಉತ್ಪಾದನೆ ಮತ್ತು ಸಂಸ್ಕರಣದ ವಿನಿಮಯ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

''2000ನೇ ಸಾಲಿನ ಕರ್ನಾಟಕ ಎಣ್ಣೆ ತಾಳೆ (ಸಾಗುವಳಿ, ಉತ್ಪಾದನೆ ಮತ್ತು ಸಂಸ್ಕರಣದ ವಿನಿಮಯ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, 2000ನೇ ಸಾಲಿನ ಕರ್ನಾಟಕ ಎಣ್ಣೆ ತಾಳೆ (ಸಾಗುವಳಿ, ಉತ್ಪಾದನೆ ಮತ್ತು ಸಂಸ್ಕರಣದ ವಿನಿಮಯ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. ಅನುಬಂಧ(ii)

(ii) ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವ) (ತಿದ್ದುಪಡಿ) ವಿಧೇಯಕ, 2000

ಮಂಡನೆಗೆಅನುಮತಿ ಕೋರಿಕೆ

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, 2000ನೇ ಸಾಲಿನ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರ ಹಾಕುವ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

''2000ನೇ ಸಾಲಿನ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರ ಹಾಕುವ) (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, 2000ನೇ ಸಾಲಿನ ಕರ್ನಾಟಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರ ಹಾಕುವ) (ತಿದ್ದುಪಡಿ) ವಿಧೇಯ ಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. ಅನುಬಂಧ (iii)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಮ್ಮ ವಿರೋಧ ಪಕ್ಷದ ನಾಯಕರು ಮನಸ್ಸಿಗೆ ಬಹಳ ನೋವು ಮಾಡಿಕೊಂಡಿದ್ದಾರೆ. ಬಿ.ಜೆ.ಪಿ.ಯ ಮಾನ್ಯ ಸದಸ್ಯರುಗಳೆಲ್ಲ ಧರಣಿ ಕುಳಿತಿರುವುದರಿಂದ ತಾವು ದಯವಿಟ್ಟು ಸದನದ ಸಭೆಯನ್ನು 5 ನಿಮಿಷ ಮುಂದಕ್ಕೆ ಹಾಕಿದರೆ ಒಳ್ಳೆಯದು. ನಾವು ಸದನದ ಕಾರ್ಯಕಲಾಪ ನಡೆಯುವುದಕ್ಕೇನೂ ಅಡ್ಡಿಪಡಿಸುವುದಿಲ್ಲ.

ಅಧ್ಯಕ್ಷರು : ಸದನವನ್ನು ಐದು ನಿಮಿಷ ಮುಂದಕ್ಕೆ ಹಾಕುವ ಪ್ರಶ್ನೆಯೇ ಇಲ್ಲ. ಅವತ್ತು ಕೊನೆಯ ದಿವಸ ಬಹಳಷ್ಟು ವಿಧೇಯಕಗಳ ಮಂಡನೆ , ಪರ್ಯಾಲೋಚನೆ, ಮುಂತಾದವು ಇವೆ. ಅವುಗಳೆನ್ನೆಲ್ಲ ಮುಗಿಸಬೇಕಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ದಯಮಾಡಿ ಐದು ನಿಮಿಷ ಮುಂದಕ್ಕೆ ಹಾಕಿ.

(ಗೊಂದಲ)

ಅಧ್ಯಕ್ಷರು : ಗಮನ ಸೆಳೆಯುವ ಸೂಚನೆ ತೆಗೆದುಕೊಂಡಾಗ ಕ್ಲಾರಿಫಿಕೇಶನ್ ಕೇಳುವುದಕ್ಕೆ ಒಂದು ಲೆಕ್ಕಾಚಾರ ಬೇಡವೆ ? ಒಂದು ವಿಷಯಕ್ಕೆ ಇಷ್ಟೊಂದು ಸಮಯ ತೆಗೆದುಕೊಂಡರೆ ಸದನ ನಡೆಸುವುದು ಬೇಡವೇ?

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಸದಸ್ಯರಾದ ರಾಮದಾಸ್‌ರವರು ಗುರುತರವಾದ ವಿಷಯ ಪ್ರಸ್ತಾಪಿಸಿರುವುದರಿಂದ, ಮಾನ್ಯ ಮುಖ್ಯಮಂತ್ರಿಗಳು ಇದನ್ನು ಪರಿಶೀಲನೆ ಮಾಡುತ್ತೇನೆ ಎನ್ನುವ ಭರವಸೆ ಕೊಡಬೇಕು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ವಿರೋಧ ಪಕ್ಷದ ನಾಯಕರ ಮನಸ್ಸು ಬಹಳ ಸೂಕ್ಷ್ಮವಾದುದ್ದು, ಅವರ ಬಗ್ಗೆ ನನಗೆ ಅಪಾರವಾದ ಗೌರವ ಇದೆ ಹಾಗೂ ಸ್ಥಾನಮಾನಗಳ ಬಗ್ಗೆಯೂ ನನಗೆ ಗೌರವ ಇದೆ. ಮಾನ್ಯ ಸದಸ್ಯರು ಮಾತನಾಡತಕ್ಕಂಥ ಸಂದರ್ಭದಲ್ಲಿ ಕಡತ ನನ್ನ ಮುಂದೆ ಬಂದಿದೆ ಎನ್ನತಕ್ಕಂಥ ಮಾತನ್ನು ಹೇಳಿದರು. ನಾನು ಮುಖ್ಯಮಂತ್ರಿಯಾಗಿರುವುದರಿಂದ ಪ್ರತಿದಿವಸ ನನ್ನ ಹತ್ತಿರ ಸಾವಿರಾರು ಕಡತಗಳು ಬಂದು ಹೋಗುತ್ತವೆ, ಯಾವ ಯಾವ ಕಡತ ಎಲ್ಲೆಲ್ಲಿ ಹೋಯಿತು ಎಂದು ನಾನು ಹೇಳುವುದಕ್ಕಾಗುವುದಿಲ್ಲ. ವಿರೋಧ ಪಕ್ಷದ ನಾಯಕರ ಸ್ಥಾನಮಾನಗಳ ಬಗ್ಗೆ, ಅವರ ಜವಾಬ್ದಾರಿಯ ಬಗ್ಗೆ, ಅವರ ಹೊಣೆಗಾರಿಕೆಯ ಬಗ್ಗೆ, ಯಾವುದೇ ರೀತಿಯಲ್ಲೂ ಕೂಡ ನಾನು ಅಪಸ್ವರ ಎತ್ತಿದರೆ ಅದು ಪ್ರಜಾಪ್ರಭುತ್ವಕ್ಕೆ ಎಸಗಿದ ಒಂದು ದೊಡ್ಡ ಮೋಸವಾಗುತ್ತದೆ ಕಳಂಕವಾಗುತ್ತದೆಂದು ಭಾವಿಸಿದ್ದೇನೆ. ಆದ್ದರಿಂದ, ನಾನು ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ನೀವು ಏನು ವಿಚಾರವನ್ನು ಎತ್ತಿದ್ದೀರಿ ಅದಕ್ಕೆ ನಾನು ಸ್ಪಂದಿಸಬೇಕು ಎಂದು ಎದ್ದು ನಿಂತುಕೊಂಡೆ, ಅಷ್ಟರಲ್ಲಿ ತಾವು ಸದನದ ಬಾವಿಗೆ ಬಂದು ಬಿಟ್ಟಿರಿ. ಮಾನ್ಯ ವಿರೋಧ ಪಕ್ಷದ ನಾಯಕರುಗಳಿಗೆ ಈ ಸದನದಲ್ಲಿ ತಮ್ಮ ಮುಕ್ತವಾದಂಥ ಅನಿಸಿಕೆಗಳನ್ನು ಹೇಳುವುದಕ್ಕೆ ಸಂಪೂರ್ಣವಾದ ಸ್ವಾತಂತ್ರ್ಯವಿದೆ . ನಾವು ಹೇಗೆ ಜನಪ್ರತಿನಿಧಿಗಳಾಗಿ ಇಲ್ಲಿಗೆ ಬಂದಿದ್ದೇವೆಯೋ ಅದೇ ರೀತಿ ಕೂಡ